# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಶಿವಾಜಿನಗರ ಉಪವಿಭಾಗ ಹಲಸೂರು ಕೆರೆರಸ್ತೆ, ಬೆಂಗಳೂರು-42**

---

ಸಂಖ್ಯೆ:ಸ.ಇಂ/ವಾ-91/ವಾರ್ಡ್‌ಸಭೆ/10 /2020-21 ದಿನಾಂಕ:20-02-2021

**ವಾರ್ಡ್-91 ರ ವಾರ್ಡ್ ಸಭೆಯ ನಡವಳಿ**

ದಿನಾಂಕ: 20/02/2021 ರಂದು ಶಿವಾಜಿನಗರ ಉಪ ವಿಭಾಗ ವಾರ್ಡ್-91, ಭಾರತಿನಗರ ವಾರ್ಡ್ ಕಛೇರಿಯಲ್ಲಿ ಶ್ರೀ.ರವಿ, ವಾರ್ಡ್-91 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ / ಇಲಾಖೆ |
|---|---|---|
| 1 | ಶ್ರೀ ರವಿ | ಸಹಾಯಕ ನಿಯಂತ್ರಕರು (ಹಣಕಾಸು-ದಕ್ಷಿಣ) ಹಾಗೂ ನೋಡಲ್ ಅಧಿಕಾರಿ ವಾರ್ಡ್-91 |
| 2 | ಶ್ರೀ ಸೈಫುದ್ದಿನ್, | ಸಕಾನಿಅ ಶಿವಾಜಿನಗರ ಉಪ ವಿಭಾಗ |
| 3 | ಶ್ರೀ ನವೀನ್ | ಆರೋಗ್ಯ ವೈದ್ಯಾಧಿಕಾರಿ, ಶಿವಾಜಿನಗರ ವಲಯ |
| 4 | ಶ್ರೀ ಶಿವಕುಮಾರ್, | ಸ.ಕ.ಅ(ಶಿವಾಜಿನಗರ) |
| 5 | ಶ್ರೀ ಪ್ರವೀಣ್.ಎನ್.ಎಂ, | ಸಅ ಹಾಗೂ ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್ ಸಂಖ್ಯೆ:91 |
| 6 | ಶ್ರೀ ನಿರಂಜನ್, | ಸಕಾನಿಅ(ಘ.ತ್ಯಾ.ನಿ) ಶಿವಾಜಿನಗರ ವಿಭಾಗ (ಪ್ರಭಾರೆ) |
| 7 | ಶ್ರೀ ಸತೀಶ್, | ಕಂದಾಯ ಪರಿವೀಕ್ಷಕರು |
| 8 | ಶ್ರೀ ರಾಜೇಶ್, | ಸ.ಅ(ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 9 | ಶ್ರೀ ಲಕ್ಷ್ಮಣ್, | ಸ.ಅ(ಬೆಸ್ಕಾಂ) |
| 10 | ಶ್ರೀ ಡೆನ್ಸಿಲ್, | ಗುತ್ತಿಗೆ ಕಿರಿಯ ಆರೋಗ್ಯ ಪರಿವೀಕ್ಷಕರು |

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳ / ಹಾಜರಿದ್ದವರ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಬಿಸಲಾಯಿತು.

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:** ಶಿವಾಜಿನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:91ರ ವ್ಯಾಪ್ತಿಯಲ್ಲಿ ಸಾರ್ವಜನಿಕರ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿಗಳು ಕೋವಿಡ್ ಪರೀಕ್ಷೆಯ ವಿವರಗಳನ್ನು ಸಭೆಗೆ ಈ ಕೆಳಕಂಡಂತೆ ವಿವರಗಳನ್ನು ನೀಡಿದರು.

- ವಾರ್ಡಿನಲ್ಲಿ ಇರುವ ಕೋವಿಡ್ ರೋಗಿಗಳ ಮಾಹಿತಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ಪರವಾಗಿ ಹಾಜರಿದ್ದ ಸ್ಟಾಫ್ ನರ್ಸ್‌ರವರಿಂದ ಹಾಗೂ ಸಂಬಂಧಪಟ್ಟ ಆರೋಗ್ಯ ವೈಧ್ಯಾಧಿಕಾರಿಗಳಂದ ಪಡೆಯಲಾಗಿದ್ದು, ಇದರ ಬಗ್ಗೆ ಮತ್ತಷ್ಟು ಜಾಗ್ರತೆವಹಿಸಲು ತಿಳಿಸಿರುತ್ತಾರೆ. ಅದರಂತೆ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳು ಇದರ ಬಗ್ಗೆ ಅವಶ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

- ಅಧ್ಯಕ್ಷರು ಮಾತನಾಡಿ ಈಗಾಗಲೇ ಪಕ್ಕದ ವಾರ್ಡ್ ಪ್ರದೇಶದಲ್ಲಿ ಕರೋನ ವೈರಸ್ ಮತ್ತೆ ಹೆಚ್ಚಾಗುತ್ತಿರುವುದು ಗಮನಿಸಲಾಗಿರುತ್ತದೆ, ಆದ್ದರಿಂದ ನಮ್ಮ ವಾರ್ಡ್ ಪ್ರದೇಶದಲ್ಲಿ ಮುಜಾಂಗ್ರತೆ ಕ್ರಮವಾಗಿ ಎಲ್ಲಾ ರಸ್ತೆಗಳಿಗೆ ಮತ್ತೊಮ್ಮೆ ಔಷಧಿ ಸಿಂಪಡಿಸಲು ಸಬೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ ರವರಿಗೆ ಕ್ರಮವಹಿಸಲು ಆದೇಶಿಸಿದರು.

Scanned with CamScanner

- ಅಧ್ಯಕ್ಷರು ಮಾತನಾಡಿ, ತಾತ್ಕಾಲಿಕ ಪರೀಕ್ಷಾ ಕೇಂದ್ರಗಳನ್ನು ಕ್ರಿಮಿಟೋರಿಯಂ ಸ್ಥಳದ ಜೊತೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಸ್ಥಳಗಳಾದ ಪೋಲೀಸ್ ಠಾಣೆ ಹತ್ತಿರ, ತರಕಾರಿ ಅಂಗಡಿಗಳ ಸಮೀಪ, ಪೇಟೆ ಬೀದಿಗಳಂತಹ ಸ್ಥಳಗಳಲ್ಲಿ ಕ್ಯಾಂಪ್‌ಗಳನ್ನು ಹಮ್ಮಿಕೊಂಡು ಹೆಚ್ಚಿನ ಪರೀಕ್ಷೆ ನಡೆಸುವಂತೆ ಸೂಚಿಸಿದರು.

- ವಾರ್ಡ್‌ವಾರು ಪ್ರದೇಶದ ಸ್ಥಳಗಳಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸಭೆಯ ಗಮನಕ್ಕೆ ತಂದಿರುತ್ತಾರೆ, ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರಿಗೆ ವಾರ್ಡ್ ಪ್ರದೇಶದ ಆಯ್ದ ಸ್ಥಳಗಳಲ್ಲಿ ಔಷಧಿ ಸಿಂಪಡಿಸಲು ಸೂಚಿಸಿರುತ್ತಾರೆ ಮತ್ತು ರಸೆಲ್ ಮಾರುಕಟ್ಟೆ ಒಳಾಂಗಣದಲ್ಲಿರುವ ಅನುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಸ್ವಚ್ಛಗೊಳಿಸಲು ಸಭಾ ಗಮನಕ್ಕೆ ತರಲಾಗಿ ಈ ಬಗ್ಗೆ ಚರ್ಚಿಸಲಾಗಿ ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ರವರಿಗೆ ಕ್ರಮವಹಿಸಲು ತಿಳಿಸಿರುತ್ತಾರೆ.

- ವಾರ್ಡ್‌ನಲ್ಲಿ ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ಅರ್ಹ ಫಲಾನುಭವಿಗಳಿಂದ ಆಹ್ವಾನಿಸಲಾಗಿರುವ ಅರ್ಜಿಗಳನ್ನು ಪರಿಶೀಲಿಸಿ, ಒಂಟಿ ಮನೆ ನಿರ್ಮಾಣಕ್ಕಾಗಿ ಬಂದಿರುವ ಅರ್ಜಿಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ, ಸದರಿ ಫಲಾನುಭವಿಗಳಿಗೆ ತ್ವರಿತವಾಗಿ ಮನೆ ನಿರ್ಮಾಣಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಲಾಗಿರುತ್ತದೆ. ಆದುದರಿಂದ ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸುತ್ತಾ, ಫಲಾನುಭವಿಗಳಿಗೆ ಅತಿ ಜರೂರಾಗಿ ಮನೆ ನಿರ್ಮಾಣಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ಅವಶ್ಯ ಕ್ರಮ ವಹಿಸಲು ಸೂಚಿಸಿರುತ್ತಾರೆ.

2) **ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಂಬಂಧಿಸಿದಂತೆ**:- ಸ್ಯಾನಿಟರಿ ಚೇಂಬರ್‌ಗಳಿಂದ ಮೇಲೆತ್ತುವ ಹೂಳನ್ನು ಸೂಕ್ತ ರೀತಿಯಲ್ಲಿ ಸಕಾಲದಲ್ಲಿ ವಿಲೇವಾರಿ ಮಾಡುವಂತೆ ಹಾಗೂ ರಸ್ತೆಗಿಂತ ಎತ್ತರ ಅಥವಾ ತಗ್ಗಿನಲ್ಲಿರುವ ಸ್ಯಾನಿಟರಿ ಚೇಂಬರ್‌ಗಳಿದ್ದರೆ ಶೀಘ್ರವಾಗಿ ರಸ್ತೆ ಮಟ್ಟಕ್ಕೆ ಸರಿಪಡಿಸುವಂತೆ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಇಂಜಿನಿಯರ್ ರವರಿಗೆ ಸೂಚಿಸಿದರು.

3) **ಇಂಜಿನಿಯರಿಂಗ್ ಇಲಾಖೆ**:- ವಾರ್ಡ್‌ನಲ್ಲಿ, ಉಪವಿಭಾಗ ವ್ಯಾಪ್ತಿಯ ತಾತ್ಕಾಲಿಕ ವಿಪತ್ತು ನಿರ್ವಹಣಾ ತಂಡ ಕಾರ್ಯನಿರ್ವಹಿಸುತ್ತಿದೆ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವು ಚಾಲನೆಯಲ್ಲಿರುತ್ತದೆ ಹಾಗೂ ಸಹಾಯ 2.0 ಆ್ಯಪ್‌ನಲ್ಲಿನ ದೂರುಗಳನ್ನು ಕಾಲಮಿತಿಯೊಳಗೆ ಸಮರ್ಪಕವಾಗಿ ಪರಿಹರಿಸಲಾಗುತ್ತಿದೆ ಎಂದು ಸಹಾಯಕ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

4) **ವಿದ್ಯುತ್ ಇಲಾಖೆ**:- ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ರಸ್ತೆಗಳ ವಿದ್ಯುತ್ ಕಂಬಗಳನ್ನು ಪರಿಶೀಲಿಸಿ, ದುಸ್ಥಿತಿಯಲ್ಲಿರುವ ಕಂಬಗಳನ್ನು ಬದಲಾಯಿಸಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಇಲಾಖೆಯವರಿಗೆ ಸೂಚಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಪ್ರವೀಣ್.ಎಸ್.ಎಂ)
**ಸ.ಅ & ಕಾರ್ಯದರ್ಶಿ**
**ವಾರ್ಡ್-91, ಭಾರತಿನಗರ**

(ರವಿ)
**ಸ.ನಿ(ಹ-ದ) & ನೋಡಲ್ ಅಧಿಕಾರಿ**
**ವಾರ್ಡ್-91, ಭಾರತಿನಗರ**

Scanned with CamScanner